ಮಧ್ಯಾಹ್ನದ ಹೊತ್ತಿಗೆ ಗೋದಾಮು ತಲುಪಿದ್ದೆವು. ಬಿಸಿಲ ಧಗೆಯನ್ನೇ ಹೊತ್ತುಕೊಂಡಿದ್ದರೂ ಹದವಾಗಿ ಬೀಸುತ್ತಿದ್ದ ಗಾಳಿಗೆ ಅಬ್ದುಲ್ಲ ಕೈಕಾಲು ಬಿಡಿಸಿ ಸೊಂಪಾಗಿ ಮಲಗಿದ್ದ.

'ಅಬ್ದುಲ್ಲ...' ನಮ್ಮ ಡ್ರೈವರ್ ಮೊದಲಬಾರಿ ಕರೆದಾಗ ಆತ ಮಿಸುಕಾಡಲಿಲ್ಲ.

'ಶೇಖ್ ಅಬ್ದುಲ್ಲ...' ಡ್ರೈವರ್ ಹತ್ತಿರ ಹೋಗಿ ಇನ್ನೊಮ್ಮೆ ದನಿಯೆತ್ತರಿಸಿ ಕರೆದ.

ಮೆಲ್ಲನೆ ಕಣ್ಣುಬಿಟ್ಟ ಅಬ್ದುಲ್ಲ. ಎದುರಲ್ಲಿ ನಾನು. 'ಹೋ' ಎಂದು ಮುಖವರಳಿಸಿ ಗಡಿಬಿಡಿಯಲ್ಲಿ ಎದ್ದು ಬಂದು ಕೈ ಕುಲುಕಿದ್ದ.

ಆತನಿಗೆ ಇಂಗ್ಲಿಷ್ ಅಥವಾ ಹಿಂದಿ ಬರುವುದಿಲ್ಲ. ನನಗೆ ಅರೆಬಿಕ್ ಗೊತ್ತಿಲ್ಲ. ನಮ್ಮ ಡ್ರೈವರನಿಗೆ ಹರಕು ಮುರುಕು ಇಂಗ್ಲಿಷ್ ಮತ್ತು ಅಗತ್ಯಕ್ಕೆ ತಕ್ಕಷ್ಟು ಅರೆಬಿಕ್ ಗೊತ್ತಿತ್ತು, ಅಂತಲೇ ಆತನನ್ನು ನನ್ನೊಂದಿಗೆ ಕರೆದು ತಂದಿದ್ದೆ.

'ಅಸಾಧ್ಯ ಬಿಸಿಲು' ತಾನು ಮಲಗಿದ್ದಕ್ಕೆ ನಾಚಿಕೊಂಡು ಸಮಜಾಯಿಷಿ ನೀಡಿದ ಅಬ್ದುಲ್ಲ. ಪರವಾಗಿಲ್ಲ ಎಂದೆ ನಾನು.

ಬಂದ ಕೆಲಸ ಮುಗಿಸಿ ಗೋದಾಮು ಬಿಟ್ಟು ಹೊರಡುವಾಗ, 'ಅಬ್ದುಲ್ಲ... ಸಾಹೇಬರಿಗೆ ನಿನ್ನ ಮಜ್ಲೀಸ್ ತೋರಿಸುವುದಿಲ್ಲವಾ?' ಎಂದ ಡ್ರೈವರ್. ಅಬ್ದುಲ್ಲ ನಾಚಿಕೊಂಡ. ಡ್ರೈವರ್ ತಾನೇ, 'ಬನ್ನಿ ಬನ್ನಿ' ಎಂದು ನನ್ನನ್ನು ಗೋದಾಮಿನ ಎದುರಿನ ಮೂಲೆಗೆ ಕರೆದೊಯ್ದ. ಗೋಡೆಯ ಬದಿಯಲ್ಲಿ ಕಾರ್ಟನ್ನುಗಳನ್ನೇ ಗೋಡೆಯ ಹಾಗೆ ಪೇರಿಸಿಟ್ಟು ಒಂದು ಕೋಣೆಯಂತಹ ಜಾಗ ಸಿದ್ಧಪಡಿಸಿ ಅಬ್ದುಲ್ಲ ಹಳೆಯ ಕಾರ್ಪೆಟುಗಳನ್ನೆಲ್ಲ ಅಲ್ಲಿ ಹಾಸಿಕೊಂಡಿದ್ದ. ಕೋಣೆಯ ಸುತ್ತಲೂ ಒಪ್ಪವಾಗಿಟ್ಟಿದ್ದ ಬೇರೆ ಬೇರೆ ಅಳತೆಯ ಹಲವಾರು ದಿಂಬುಗಳು, ನಡುವೆ ಒಂದು ದೊಡ್ಡ ಕುರ್ಚಿ.

'ಇದು ಇವನ ಮಜ್ಲೀಸ್...' ತೋರಿಸುತ್ತ ನುಡಿದ ಡ್ರೈವರ್.

ಅರಬಿಗಳ ಮಜ್ಲೀಸ್ ನನಗೆ ಹೊಸತೇನಲ್ಲ. ಹಾಸಿರುವ ಕಾರ್ಪೆಟುಗಳ ಮೇಲೆ ನೆಲದಲ್ಲೇ ದಿಂಬುಗಳ ಆಸರೆಯೊಂದಿಗೆ ಕುಳಿತು ಸಂವಾದ ನಡೆಸುವುದು ಅರಬರ ಸಂಸ್ಕೃತಿ. ಆದರೆ ಇಲ್ಲಿ ನಡುವಿಗಿದ್ದ ಕುರ್ಚಿ ನನ್ನ ಗಮನ ಸೆಳೆದಿತ್ತು. ಸಾಧಾರಣ ಕುರ್ಚಿಗಿಂತ ಅದು ಎರಡುಪಟ್ಟು ದೊಡ್ಡದಿತ್ತು. ಅದರ ಮುರಿದ ಹಿಂಗಡೆಯ ಕಾಲಿಗೆ ಆಧಾರವಾಗಿ ಸಿಮೆಂಟು ಇಟ್ಟಿಗೆಗಳನ್ನು ಜೋಡಿಸಿಡಲಾಗಿತ್ತು. ಮುಂದಿನ ಒಂದು ಕಾಲೂ ಮುರಿದಿತ್ತು. ಮುರಿದ ತುಂಡನ್ನೂ ಅಲ್ಲೆ ರೀಪರ್ ಜತೆಗಿಟ್ಟು ಭದ್ರವಾಗಿ ಸುತ್ತಿ ಕಟ್ಟಲಾಗಿತ್ತು. ಕುರ್ಚಿಯ ಎರಡು ಕೈಗಳಲ್ಲಿ ಒಂದರ ಮೇಲೆ ಮೆತ್ತಗಿನ ಹೊದಿಕೆಯಿತ್ತು. ಇನ್ನೊಂದು ಕೈಯ ಹೊದಿಕೆ ಕಿತ್ತುಹೋಗಿ ಒಳಗಿನ ಮರದ ಹಲಗೆ ಗೋಚರಿಸುತ್ತಿತ್ತು. ಕುರ್ಚಿಯ ಬೆನ್ನಿನಲ್ಲಿದ್ದ ಹಲಗೆಯಲ್ಲಿ ಕುಸುರಿ ಕೆತ್ತನೆಗಳಿದ್ದವು. ಬೃಹದಾಕಾರದ ಸೀಟಿನ ಮೇಲಿನ ಹೊದಿಕೆ ಹರಿದುಹೋಗಿತ್ತು. ಅದರ ಮೇಲೆ ಬೇರೊಂದು ಬಟ್ಟೆಯನ್ನು ಮಡಿಕೆ ಮಾಡಿ ಹಾಸಿಡಲಾಗಿತ್ತು. ಎರಡು ಚಿಕ್ಕ ದಿಂಬುಗಳೂ ಸೀಟಿನ ಮೇಲೆ ಇದ್ದವು. ಬೆನ್ನ ಹಲಗೆಯ ಹಿಂದಿನಿಂದ ಒಂದೂವರೆ ಮೀಟರ್ ಎತ್ತರಕ್ಕೆ ಕೊಡೆಯಾಕಾರದ ಕೋಲು ಬೇರೆ ರಾರಾಜಿಸುತ್ತಿತ್ತು.

'ಅದೇ ಅವನ ಗದ್ದುಗೆ... ಇವೆಲ್ಲ ಸಭಾಸದರ ಆಸನಗಳು' ಕುರ್ಚಿಯನ್ನೂ ದಿಂಬುಗಳನ್ನೂ ತೋರಿಸಿದ ಡ್ರೈವರ್.

'ತಮಾಷೆ ಮಾಡುತ್ತಿದ್ದೀಯೇನೋ... ಪಾಪ' ಅಂದೆ ನಾನು.

'ನೀವು ನನ್ನ ಮಾತು ನಂಬುವುದಿಲ್ಲ ಅಲ್ಲವಾ?... ಹೋಗಿ ಆ ಕುರ್ಚಿಯಲ್ಲಿ